**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.868/2024**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸ್ ಸೇಡಂ

-ಃಃ ವಿರುದ್ದ ಃಃ-

ಆರೋಪಿ ಃ

1. ಲಕ್ಷ್ಮೀ ಗಂಡ ರಾಜು ರಾಠೋಡ
   ವಃ 28 ವರ್ಷ, ಉಃ ಕೂಲಿ

2. ರಾಜು ತಂದೆ ಗುಂಡಪ್ಪ @ ಗುಂಡ್ಯಾ ರಾಠೋಡ
   ವಃ 35 ವರ್ಷ, ಉಃ ಮನೆ ಮಾಲಿಕ
   ಎಲ್ಲರೂ ಸಾಃ ಹಾಜಿ ಸರವರ ತಾಂಡಾ ಸೇಡಂ ಪಟ್ಟಣ
   ತಾಃ ಸೇಡಂ, ಜಿಃ ಕಲಬುರಗಿ

----

**ದೋಷಾರೋಪಣೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 25-11-2022 ರಂದು ಮುಂಜಾನೆ 08.00 ಗಂಟೆ ಸುಮಾರಿಗೆ ಚಾಸಾ.1, ಸಿಬ್ಬಂದಿ ಹಾಗೂ ಪಂಚರೊಂದಿಗೆ ಅಬಕಾರಿ ಅಕ್ರಮಗಳನ್ನು ಪತ್ತೆ ಹಚ್ಚಲು ಸೇಡಂ ಶಹರದ ಹಾಜಿ ಸರವಾರ ತಾಂಡಾದಲ್ಲಿ ಲಕ್ಷ್ಮೀ ಗಂಡ ರಾಜು ನಾಮದೇವ ಇವರ ಮನೆ ಮೇಲೆ ಅಬಕಾರಿ ದಾಳಿ ಮಾಡಿ ಶೋಧನೇ ಮಾಡಿದಾಗ ಮನೆಯ ಎರಡೂ ಕೋಣೆಗಳಿಂದ ಕೂಡಿದ್ದು, ಮೊದಲನೆ ಕೊಣೆಯ ಮದ್ಯದಲ್ಲಿ 20 ಲೀ. ಅಳತೆಯ ನೀಲಿ ಬಣ್ಣ ಮಿಶ್ರಿತ ಬಿಳಿ ಬಣ್ಣದ ಪ್ಲಾಸ್ಟಿಕ ಬಕೇಟಿನಲ್ಲಿ 20 ಲೀ ಕಲಬೆರಿಕೆ ಸೇಂದಿ 2)10 ಲೀ. ಅಳತೆಯ ಕೇಸರಿ ಬಣ್ಣದ ಪ್ಲಾಸ್ಟಿಕ ಕೊಡದಲ್ಲಿ 10 ಲೀ. ಕಲಬೆರಿಕೆ ಸೇಂದಿ 3) 500 ಗ್ರಾಂ ಸೇಂದಿ ಪೇಸ್ಟ 4) 500 ಗ್ರಾಂ ಸಿ.ಹೆಚ್.ಪೌಡರ ಮಾರಾಟದ ಉದ್ದೇಶಕ್ಕಾಗಿ ಸಂಗ್ರಹಿಸಿಟ್ಟಿರುವುದು ಕಂಡು ಬಂದಿದ್ದು, ಸದರಿ ಸೇಂದಿ , ಸೇಂದಿ ಪೆಸ್ಟ ಹಾಗೂ ಸಿ.ಹೆಚ್.ಪೌಡರ ಜಪ್ತಿ ಮಾಡಿಕೊಂಡಿದ್ದು ಮತ್ತು ಸದರಿಯವುಗಳನ್ನು ರಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಅದು ಮಾನವ ಸೇವನೆಗೆ ಯೋಗ್ಯವಾಗಿರುವುದಿಲ್ಲ ಎಂದು ಧೃಢಪಟ್ಟಿದ್ದು, ಕಾರಣ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ,38(ಎ) ಹಾಗೂ ಭಾ. ದಂ. ಸಂಹಿತೆ ಕಲಂ 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 08-10-2025 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.868/2024**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸ್ ಸೇಡಂ

-ಃಃ ವಿರುದ್ದ ಃಃ-

ಆರೋಪಿ ಃ 1. ಲಕ್ಷ್ಮೀ ಗಂಡ ರಾಜು ರಾಠೋಡ
ವಃ 28 ವರ್ಷ, ಉಃ ಕೂಲಿ
ಸಾಃ ಹಾಜಿ ಸರವರ ತಾಂಡಾ ಸೇಡಂ ಪಟ್ಟಣ
ತಾಃಸೇಡಂ, ಜಿಃ ಕಲಬುರಗಿ ಹಾಗೂ ಇನ್ನೊಬ್ಬರು

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕ 08-10-2025 ಪ್ರ.ದ.ನ್ಯಾ.ದಂ. ಸೇಡಂ.